ಶ್ರೀ ಎನ್. ಚೆಲುವರಾಯಸ್ವಾಮಿ:– ಅದರ ಜೊತೆಗೆ ಇನ್ನೂ ಹೆಚ್ಚಿಗೆ ಗಮನವನ್ನು ಹರಿಸಿ ಅವರೆಲ್ಲರೂ ಇರಲಿಕ್ಕೆ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅವರಿಗೆ ಎಲ್ಲಾ ಸವಲತ್ತುಗಳನ್ನೂ ಕೊಡುತ್ತೇವೆ. ಸ್ಟಿಕ್ಟ್ ಆಗಿ ಅವರು ಕೆಲಸ ಮಾಡುವುದಕ್ಕೂ ಅವಕಾಶ ಮಾಡುತ್ತೇವೆ. ಆ ಕಾಂಟ್ರಾಕ್ಟ್ ಬೇಸಿಸ್ ಕಡಿಮೆ ಮಾಡಿ ನೇರ ನೇಮಕಾತಿ ಮಾಡಬೇಕೆನ್ನುವ ಒಂದು ಯೋಚನೆಯೂ ಸಹ ನಮ್ಮಲ್ಲಿ ಹೆಚ್ಚಿರುವುದರಿಂದ ಸ್ವಲ್ಪ ದಿವಸ ಅದಕ್ಕೆ ಅವಕಾಶವನ್ನು ಕೊಡಿ.

ಬೇಲೂರು ಘೋಷಣೆಯ ಅನುಷ್ಠಾನ

234 (1863)ಶ್ರೀ ಕೃಷ್ಣಮೂರ್ತಿ ಕೆ. ಎಂ. (ಕಡೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮ ಪಂಚಾಯ್ತಿಗೆ ಬೇಲೂರು ಘೋಷಣೆ ವ್ಯವಸ್ಥೆ ಅಳವಡಿಸಿರುವುದರಿಂದ ಪ್ರಗತಿಯಾಗಿದೆಯೇ: ಇದ್ದಲ್ಲಿ ಹೆಚ್ಚು ಮೊತ್ತದ ಕಾಮಗಾರಿ ನಿರ್ವಹಿಸುವ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ನೀಡಿರುವುದು ಸರಿಯೇ?

ಆ) ಈ ಬಗ್ಗೆ ಸರ್ಕಾರದಲ್ಲಿ ಮರುಪರಿಶೀಲನೆ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಆದೇಶ ಮಾರ್ಪಾಡು ಮಾಡುವ ಚಿಂತನೆ ಸರ್ಕಾರದಲ್ಲಿ ಇದೆಯೇ?

ಶ್ರೀ ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):–

ಅ) ಹೌದು.

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಮಾನ್ಯ ಅಧ್ಯಕ್ಷರೇ, ಗ್ರಾಮ ಪಂಚಾಯ್ತಿಗೆ ಬೇಲೂರು ಘೋಷಣೆ ವ್ಯವಸ್ಥೆ ಅಳವಡಿಸಿರುವುದರಿಂದ ಪ್ರಗತಿಯಾಗಿದೆಯೇ ಎಂದು ಕೇಳಿದ್ದಕ್ಕೆ "ಹೌದು" ಎಂದು ಉತ್ತರ ಹೇಳಿದ್ದಾರೆ. ಏನಾದರೂ ಪ್ರಗತಿಯಾಗಿದ್ದರೆ ಪೇಪರ್ ಮೇಲೆ ಪ್ರಗತಿಯಾಗಿದೆ. ಏನು 172 ಕಾರ್ಯಕ್ರಮಗಳು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ನಾನೂ ಕೂಡ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಆದರೆ ಅವ್ಯಾವುದೇ ಕಾರ್ಯಕ್ರಮಗಳು ಜಾರಿಯಾಗಲಿಲ್ಲ. ಪತ್ರಿಕೆಯಲ್ಲಿ ಬಂತು, ಪೇಪರ್‌ನಲ್ಲಿ ಆದೇಶ ಇದೆ, ಅದು ಇನ್ನೂ ಜಾರಿಯಾಗಲಿಲ್ಲ. ಎಷ್ಟು ಸರಳವಾಗಿ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಿದರೆ ಇದರಿಂದ ಪ್ರಶ್ನೋತ್ತರ ವೇಳೆಯ ಮಹತ್ವವನ್ನು ಕಳೆದುಕೊಳ್ಳುತ್ತದೆ. ಹೌದು, ಇಂದು ಕೆಲಸ ಮಾಡಿ. ಮುಂದಿನವಾರ ಏನಾದರೂ ಇದರ ಬಗ್ಗೆ ಒಂದು ಗಂಟೆ ಏನಾದರೂ ಮಾತನಾಡಲು ಅವಕಾಶ ಕೊಟ್ಟರೆ ನಾನೂ ಕೂಡ ನನ್ನ ಕ್ಷೇತ್ರದಲ್ಲಿ 60 ಗ್ರಾಮ ಪಂಚಾಯಿತಿಯಲ್ಲಿ ಬೇಲೂರು ಘೋಷಣೆ ಏನು ಹಿಂದೆ ಸರ್ಕಾರ ಅನುಷ್ಟಾನಕ್ಕೆ ತಂದಿತ್ತು, ಅದೇನಾದರೂ ಬಂದಿದೆಯೇ ಎಂದು ಮಾತನಾಡುವುದಕ್ಕೆ ಆಗುತ್ತದೆ.

ಏಕೆಂದರೆ ಬರೀ ಸ್ಪಷ್ಟೀಕರಣ ಕೊಡುತ್ತಾರೆ. ಬೇಲೂರು ಘೋಷಣೆ ಜಾರಿಗೆ ಬಂದಿದೆ, ಹೌದು. ಎಲ್ಲಿ ಬಂದಿದೆ? ಗ್ರಾಮ ಪಂಚಾಯಿತಿಯಲ್ಲಿ ಒಬ್ಬ ಕಾರ್ಯದರ್ಶಿಯಾದಂಥವರು 172 ಕಾರ್ಯಕ್ರಮಗಳನ್ನು ಅಂದರೆ ಓವರ್‌ಹೆಡ್ ಟ್ಯಾಂಕ್ ಇರಬಹುದು, ಮಿನಿ ವಾಟರ್‌ಸಪ್ಲೈ ಇರಬಹುದು, ಒಂದು ಶಾಲಾ ಕೊಠಡಿ ಇರಬಹುದು, ಅಂಗನವಾಡಿ ಕಟ್ಟಡ ಇರಬಹುದು, ಅದನ್ನು ಟೆಂಡರ್ ಕರೆಯುವುದರಿಂದ ಒಬ್ಬ ಕಾರ್ಯದರ್ಶಿ ಆ ಕೆಲಸವನ್ನು ನಿರ್ವಹಿಸಬೇಕಾಗಿದೆ. ಒಂದು, ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ, ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ನನಗೆ ನಂಬಿಕೆ ಇದೆ. ನೀವು ಏನಾಡುವ ಹಾಗೆ ಇದ್ದರೆ ಅದನ್ನೇನಾದರೂ ಒಂದು ಸ್ಟಾಫ್‌ಪ್ಯಾಟ್ರನ್ ಛೇಂಜ್ ಮಾಡಿ ಅಲ್ಲಿಗೆ ಒಂದು ಆಡಳಿತದ ವ್ಯವಸ್ಥೆಯನ್ನು ಮಾಡುವುದಕ್ಕೆ ಅಧಿಕಾರ ವರ್ಗದವರನ್ನು ನೇಮಿಸಿ ಅದನ್ನು ಮಾಡಬೇಕು. ನೀವು 172 ಕಾರ್ಯಕ್ರಮದ ಬಗ್ಗೆ ಕೊಟ್ಟಿದ್ದೀರಿ.

ಅಧ್ಯಕ್ಷರು:– ಪ್ರಶ್ನೆ ಕೇಳಿ ಸ್ವಾಮಿ

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಒಂದೂ ಜಾರಿಗೆ ಬಂದಿಲ್ಲ. ಹೌದು ಎಂದು ಹೇಳಿದ್ದಾರೆ. ಒಂದೂ ಕೂಡ ಜಾರಿಗೆ ಬಂದಿಲ್ಲ.

ಅಧ್ಯಕ್ಷರು:– ಅದನ್ನು ಕೇಳಿ ಏಕೆ ಬಂದಿಲ್ಲ, ಏನು ಎಂದು ಕೇಳಿ.

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಹೆಚ್ಚು ಮೊತ್ತದ ಕಾಮಗಾರಿ ನಿರ್ವಹಿಸುವ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ನೀಡಿರುವುದು ಸರಿಯೇ? ಕಾರ್ಯದರ್ಶಿ ಒಬ್ಬ ಅಲ್ಲಿ ಈ 172 ಕಾರ್ಯಕ್ರಮಗಳನ್ನು ನಿರ್ವಹಿಸುವುದಕ್ಕೆ ಸಾಧ್ಯವೇ? ಆಮೇಲೆ ಈ ಬಗ್ಗೆ ಸರ್ಕಾರದಲ್ಲಿ ಮರುಪರಿಶೀಲನೆಯನ್ನು ಮಾಡಲಾಗಿದೆಯೇ? ಇಲ್ಲ ಎಂದು ಹೇಳುತ್ತಾರೆ. ಮರು ಪರಿಶೀಲನೆ ಮಾಡದೇ ಇದ್ದರೆ ಅಲ್ಲಿ ನಿಜವಾಗಲೂ ಕೂಡ ಸರ್ಕಾರದ ಕಾರ್ಯಕ್ರಮಗಳು ವಿಫಲ ಆಗುತ್ತದೆ. ಜನರಿಗೆ ಮುಟ್ಟುವುದಿಲ್ಲ. ಇಲ್ಲ ಒಂದು ಸಾರಿ ವಿಧಾನಸಭೆಯಲ್ಲಿ ಮರು ಪರಿಶೀಲನೆ ಆಗಲೇಬೇಕು. ಹಿಂದೆ ಏನಾಯಿತು ಎಂದರೆ ಕಾಂಗ್ರೆಸ್ ಸರ್ಕಾರ ಇದ್ದಾಗ ಯಾವುದೋ ಒಂದು ಕಾರಣಕ್ಕೆ ಒಂದು 12 ದಿವಸ ಭಾರತೀಯ ಜನತಾ ಪಕ್ಷದವರು ಧರಣಿಯನ್ನು ಮಾಡಿದರು. ಕಾಂಗ್ರೆಸ್ ಸರ್ಕಾರದವರು ಅದನ್ನು ಗಿಲೆಟಿನ್ ಅಪ್ರೂವ್‌ಲ್ ತೆಗೆದುಕೊಂಡು ಅವತ್ತು ಅನುಷ್ಠಾನಕ್ಕೆ ತಂದರು ಇದರಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಏನು ಅಧಿಕಾರ ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೀರಿ, ಇದರಿಂದ ಕುಡಿಯುವ ನೀರಿನ ಸಮಸ್ಯೆ, ಹಲವಾರು ಸಮಸ್ಯೆ ಉದ್ಭವಿಸಿದೆ. ಇದರ ಬಗ್ಗೆ ಇನ್ನೊಂದು ಸಾರಿ ಮರು ಪರಿಶೀಲನೆ ಮಾಡಬೇಕು. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಧಾರವಾಡ ತಾಲ್ಲೂಕು, ಬೇಲೂರು ಗ್ರಾಮದಲ್ಲಿ ಜನವರಿ 23ನೇ ತಾರೀಖು 2004ನೇ ಇಸವಿಯಲ್ಲಿ ಗ್ರಾಮ ಪಂಚಾಯಿತಿಯ ಸದಸ್ಯರು, ಪಟ್ಟಣ ಪಂಚಾಯತಿಯ ಸದಸ್ಯರು ಎಲ್ಲಾ

ಸೇರಿ ಒಂದು ಸಭೆ ನಡೆಸಿ ನಿರ್ಣಯ ಮಾಡಿದರು. ನಾವು ದೇಶದಲ್ಲಿ ಬದಲಾವಣೆ ಆಗಬೇಕಾದರೆ ಹಳ್ಳಿಗಳಲ್ಲಿ ಬದಲಾವಣೆ ತರಬೇಕು. ಅದಕ್ಕೆ ನಾವು ಚುನಾಯಿತ ಪ್ರತಿನಿಧಿಗಳು ಪ್ರಮಾಣ ಮಾಡಿ ಹೇಳುತ್ತಿದ್ದೇವೆ. ಬದಲಾವಣೆ ತರಲಿಕ್ಕೆ ನಾವು ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಿ ಅಧಿಕಾರವನ್ನು ಪಡೆದು ಈಗಾಗಲೇ ದೇಶದ ಸಂವಿಧಾನದ ತಿದ್ದುಪಡಿ ಮುಖಾಂತರ, ಮತ್ತು ರಾಜ್ಯದ ಶಾಸಕರು ಮತ್ತು ದೇಶದ ಪಾರ್ಲಿಮೆಂಟಿನಲ್ಲಿ ಇಂತಹ ಒಂದು ಮಹತ್ತರವಾದಂತಹ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ನಮಗೆ ಜಾರಿ ಕೊಟ್ಟಿದ್ದಾರೆ. ಇದನ್ನು ಭದ್ರವಾಗಿ, ಗಟ್ಟಿಯಾಗಿ ನೆಲೆವೂರಿ ಹಳ್ಳಿಗಳಲ್ಲಿ ಬದಲಾವಣೆ ತರಲಿಕ್ಕೆ ನಾವು ಪ್ರತಿಜ್ಞೆ ಮಾಡಿ ಕೆಲಸ ಮಾಡುತ್ತೇವೆಂದು ಹೇಳಿ 23.01.2004ನೇ ಇಸವಿಯಲ್ಲಿ ಒಂದು ಪ್ರತಿಜ್ಞೆ ಮಾಡಿದರು. ಅದಕ್ಕೆ ಬೇಲೂರು ಘೋಷಣೆ ಎಂದು ಕರೆಯುತ್ತಾರೆ. ಹಾಗೆಯೇ ಸಂವಿಧಾನದ ತಿದ್ದುಪಡಿಯನ್ನು 1993ನೇ ಇಸವಿಯಲ್ಲಿ ತಂದಮೇಲೆ ರಾಜ್ಯಸರ್ಕಾರ ಯಥಾವತ್ತಾಗಿ ಅದನ್ನು ಅಂಗೀಕಾರ ಮಾಡಿಕೊಂಡು ಸುಮಾರು 29 ಸಬ್ಜೆಕ್ಟ್‌ಗಳನ್ನು ಅಧಿಕಾರದ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಸೇರಿಸಿದ್ದಾರೆ. ಅವರು ಯಾರ್ಯಾರು ಯಾವ ಅರ್ಥದಲ್ಲಿ ಕೆಲಸ ಮಾಡಬೇಕು ಎನ್ನುತಕ್ಕ ಅಧಿಕಾರವನ್ನು, ಹಣದ ಸಂಪನ್ಮೂಲವನ್ನು ಮತ್ತು ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಮಾಡಲಿಕ್ಕೆ ಈ ಘೋಷಣೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಇಲ್ಲಿರತಕ್ಕ ಸಿಬ್ಬಂದಿಗಳು, ಈಗ ಸಿಬ್ಬಂದಿಗಳ ಬಗ್ಗೆ ಈ ಮನೆಯಲ್ಲಿ ಚರ್ಚೆ ಆಗುತ್ತಿದೆ. ಮಾನ್ಯ ಸದಸ್ಯರು ಹೇಳುತ್ತಾರೆ. ನೀರಿನ ನಿರ್ವಹಣೆ ಆಗುವುದಿಲ್ಲವೆಂದು ಹೇಳುತ್ತಾರೆ. ಮತ್ತು ವಸತಿ ಸಭೆಗೆ ನಮ್ಮನ್ನು ಕೊಡಬೇಕು. ಅವರು ಸರಿಯಾಗಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ಇದಿನ್ನೆಲ್ಲಾ ಸ್ವೀಮ್‌ಲೈನ್ ಮಾಡಲಿಕ್ಕೆ ಗ್ರಾಮ ಪಂಚಾಯತಿಗಳನ್ನು ಬಲಪಡಿಸಲಿಕ್ಕೆ ನಾವು ಈಗಾಗಲೇ ಕಂದಾಯ ಇಲಾಖೆ ಮತ್ತು ಅಗ್ರಿಕಲ್ಚರಲ್ ಇಲಾಖೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ ಮತ್ತು ನೇರವಾಗಿ ಖಾಲಿ ಇರತಕ್ಕ ಕೆಲವು ಗ್ರಾಮ ಪಂಚಾಯತಿಯ ಅಧಿಕಾರಿಗಳನ್ನು ನೇಮಕ ಮಾಡಲಿಕ್ಕೆ 20 ಪರ್ಸೆಂಟ್ ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳನ್ನು ನೇಮಕ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:– ಉತ್ತರ ಕೊಡಿ, ಭಾಷಣ ಮಾಡುತ್ತಿದ್ದೀರಲ್ಲಾ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಕೃಷ್ಣಮೂರ್ತಿಗಳು ಈ ಸದನದಲ್ಲಿ ಇರುವಂತಹ ಎಲ್ಲಾ ಶಾಸಕರ ಪರವಾಗಿ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಬೇಲೂರು ಘೋಷಣೆ ಆಯಿತು. ತಾವು ಹೇಳಿದ ಪ್ರಕಾರ 23ನೇ ಜನವರಿ 2004 ಘೋಷಣೆ ಆಯಿತು. ಆಲ್‌ಮೋಸ್ಟ್ ಈಗ ಎರಡು ವರ್ಷ ಎರಡು ತಿಂಗಳು ಕಳೆದಿದೆ. ಈಗ ಆ ಗ್ರಾಮ ಪಂಚಾಯತಿಯ ಸಿಬ್ಬಂದಿಯನ್ನು ಜಾಸ್ತಿ ಮಾಡುವುದಕ್ಕೆ, ಒಬ್ಬ ಸಿಬ್ಬಂದಿಯನ್ನು ಜಾಸ್ತಿ ಮಾಡಿದ್ದೀರಿ, ಹಣ ಬಿಡುಗಡೆ ಮಾಡಿದ್ದೀರಾ? ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಇದೆ. ಲೇ ಎನ್ನುವುದಕ್ಕೆ ಅವಳೇ ಇಲ್ಲ ಎಂಬ ಗಾದೆ ಇದೆ. ಆದರೆ ಈಗ ನೀವೇನಾದರೂ...

ಶ್ರೀ ಕೆ. ಎಂ. ಕೃಷ್ಣಮೂರ್ತಿ:– 'ಲೇ ಅನ್ನುವುದಕ್ಕೆ ಅವಳೇ ಇಲ್ಲ, ಮಗನ ಹೆಸರು ರಾಮಚಂದ್ರ ಎಂಬ ಗಾದೆ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಈಗ ನೀವು ಗ್ರಾಮೀಣಾಭಿವೃದ್ಧಿ, ಸಚಿವರಾಗಿ 29 ಬೇರೆ ಬೇರೆ ರೀತಿ ಶಕ್ತಿ ತುಂಬುವ ಸಬ್ಜೆಕ್ಟ್ ಏನು ಇತ್ತು ಒಂದು, ಎರಡು, ಮೂರು ನಾಲ್ಕು ಮಾಡಿದ್ದೇವೆ ಕೃಷ್ಣಮೂರ್ತಿಗಳೇ ಮತ್ತು ಯಡಿಯೂರಪ್ಪನವರೇ, ಇನ್ನಷ್ಟು ಮಾಡುವುದಕ್ಕೆ ಈ ಪಂತದಲ್ಲಿದೆ ಎಂತ ಸ್ಪೆಸಿಫಿಕ್ ಆಗಿ ಏನಾದರೂ ಹೇಳುತ್ತೀರಾ ಸ್ವಾಮಿ? ನಿಮ್ಮ ಉತ್ತರದಲ್ಲಿ ಇದನ್ನು ಹೇಳುತ್ತೀರಾ? ಈ ಐದು ಲಕ್ಷ ರೂಪಾಯಿ ಗ್ರಾಮ ಪಂಚಾಯತಿಗೆ ಕೊಡುವುದನ್ನು ಬ್ಯಾಲೆನ್ಸ್ ಅಮೌಂಟನ್ನು 31 ರೊಳಗೆ ಕೊಡುತ್ತೀರಾ? ಹಣಕಾಸು ಸಚಿವರ ಮೇಲೆ ಪ್ರಭಾವ ಬೀರುತ್ತೀರಾ? ನಾವೂ ನಿಮ್ಮ ಜೊತೆಗೆ ಇದ್ದೇವೆ. ಆ ದುಡ್ಡು ಕೊಡುತ್ತೀರಾ? ಈ ತರಹ ಒಂದು, ಎರಡು, ಮೂರು ಏನಾದರೂ ಹೇಳಿದರೆ ನಮಗೆ ಕೃಷ್ಣ ಮೂರ್ತಿಗಳಿಗೆ ಹಾಗೂ 224 ಜನ ಶಾಸಕರಿಗೆ ಸಮಾಧಾನ ಆಗುತ್ತದೆ. ಆದ್ದರಿಂದ ಇನ್ನೊಂದು ಭಾಷಣ ಬೇಡ. ಬೇಲೂರು ಘೋಷಣೆ ಬಗ್ಗೆ ಈ ಮೂರ್ನಾಲ್ಕು ಮಾಡಿದ್ದೇವೆ ಎಂದು ಹೇಳಿ.

ಡಾ: ಹೆಚ್. ಸಿ. ಮಹದೇವಪ್ಪ:– ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾಡಿ, ಏನು ಮಾಡಿದ್ದೀರಿ ಎಂಬುದನ್ನು ಹೇಳಿ.

ಡಾ: ಹೆಚ್. ಸಿ. ಮಹದೇವಪ್ಪ:– 175 ರಾಜ್ಯ ವಲಯ ಯೋಜನೆಗಳನ್ನು ಜಿಲ್ಲಾ ವಲಯಕ್ಕೆ ವರ್ಗಾವಣೆ ಮಾಡಬೇಕು ಎಂದು 16.10.2004ರಲ್ಲಿ ಆದೇಶ ಆಗಿದೆ. ಈಗ ಈ ಆಯವ್ಯಯದಲ್ಲಿ ರಾಜ್ಯ ವಲಯದ ಎಲ್ಲಾ ಯೋಜನೆಗಳೂ ಕೂಡ ಜಿಲ್ಲಾ ವಲಯಕ್ಕೆ ಹಸ್ತಾಂತರ ಆಗುತ್ತದೆ ಎಂದು ಹೇಳಿದ್ದಾರೆ. ಅದರಿಂದ ಅವರಿಗೆ ಹಣಕಾಸಿನ ಸಂಪನ್ಮೂಲ ಹೆಚ್ಚಾಗುತ್ತದೆ. 5 ಲಕ್ಷರೂಪಾಯಿ ಕೊಡಬೇಕಾಗಿರತಕ್ಕದ್ದು ಅದನ್ನು ಕೊಡಲೇಬೇಕು. ಸ್ಟ್ಯಾಚುಟರಿ ಗ್ರಾಂಟ್ ಅವರಿಗೆ ಕೊಟ್ಟೇ ಕೊಡುತ್ತೇವೆ. ಅದರ ಬಗ್ಗೆ ಏನೂ ಅನುಮಾನ ಬೇಡ. ಅದನ್ನು ಕೊಟ್ಟೇ ಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– 31 ರೊಳಗೆ ಉಳಿದಂತಹ ಬ್ಯಾಲೆನ್ಸ್ ಅಮೌಂಟನ್ನು ಗ್ರಾಮ ಪಂಚಾಯತಿಗಳಿಗೆ ಸ್ಯಾಂಕ್ಷನ್ ಮಾಡಿ ಕೊಡುತ್ತೀರಾ?

ಡಾ: ಹೆಚ್. ಸಿ. ಮಹದೇವಪ್ಪ:– 5 ಲಕ್ಷ ರೂಪಾಯಿ ಕೊಡಲೇಬೇಕು, ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಯಾವಾಗ ಕೊಡುತ್ತೀರಿ ಎಂಬುದನ್ನಾದರೂ ಹೇಳಿ ಅಂದರೆ ಅದನ್ನೂ ಹೇಳುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಹೋದ ವರ್ಷದ್ದೂ ಕೊಟ್ಟಿಲ್ಲ, ಈ ವರ್ಷದ್ದೂ ಕೊಟ್ಟಿಲ್ಲ ಎಂದು ನಾವು ಹೇಳುತ್ತಿರುವುದು.

ಅಧ್ಯಕ್ಷರು:– ಅವರ ಪರಿಸ್ಥಿತಿಯನ್ನೂ ಅರ್ಥಮಾಡಿಕೊಳ್ಳಿ.

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಅರ್ಥಮಾಡಿಕೊಳ್ಳುವ ಪ್ರಶ್ನೆ ಇಲ್ಲ.

ಡಾ: ಹೆಚ್. ಸಿ. ಮಹದೇವಪ್ಪ:– 31ರ ತಾರೀಖಿನ ಒಳಗಡೆ ಏನು ಸ್ಟ್ಯಾಚುಟರಿ ಗ್ರಾಂಟ್ ಅನ್ನು ಗ್ರಾಮ ಪಂಚಾಯತಿಗೆ ಕೊಡಬೇಕು, 31ರೊಳಗೆ ಕೊಟ್ಟೇ ಕೊಡುತ್ತೇವೆ. ತಮಗೆ ಹೇಳುತ್ತಿದ್ದೇನಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದು ಎಷ್ಟು ಎಂದು ಸ್ವಲ್ಪ ಸ್ಪಷ್ಟೀಕರಣ ಹೇಳಬೇಕು. ನಿಮ್ಮ ಪ್ರಕಾರ ಅದು ಎಷ್ಟು?

ಶ್ರೀ ಬಿ. ಎಸ್. ಯಡಿಯೂರಪ್ಪ:– ಎಷ್ಟು ಕೊಟ್ಟಿದ್ದೀರಿ? ಈಗ ಎಷ್ಟು ಕೊಡಬೇಕು?

ಡಾ: ಹೆಚ್. ಸಿ. ಮಹದೇವಪ್ಪ:– 282.65 ಕೋಟಿ ರೂ. ಎಕ್ಸ್‌ಟ್ರಾ ಬಜೆಟ್ ಈಗ ಕೊಡಬೇಕು. 31 ರೊಳಗೆ ಕೊಟ್ಟರೆ...

ಶ್ರೀ ಜೆ. ಎ. ಶ್ರೀರಾಮರೆಡ್ಡಿ:– ಮಾನ್ಯ ಮಹದೇವಪ್ಪನವರೇ, ಬೇಲೂರು ಘೋಷಣೆಯನ್ನು ದಯವಿಟ್ಟು ನೀವು ವಾಪಸ್ ಪಡೆಯಿರಿ. ಇಲ್ಲ ಎಂದರೆ ಹಣ ಒದಗಿಸಿ. ಎರಡರಲ್ಲಿ ಒಂದು ಮಾಡಿ. ನೀವು ಸುಮ್ಮನೆ ಘೋಷಣೆ ಮಾಡಿಬಿಟ್ಟು ಅದಕ್ಕೆ ಬೇಕಾಗಿರತಕ್ಕಂಥ ಹಣ ಒದಗಿಸಿದೆ ಬೇಲೂರು ಘೋಷಣೆ, ಬೇಲೂರು ಘೋಷಣೆ ಎಂದು ಹೇಳುವುದು ಬೇಡ. ಡಾ: ನಂಜುಂಡಪ್ಪನವರ ವರದಿ, ನಂಜುಂಡಪ್ಪನವರ ವರದಿ ಎಂದು ಹೇಳಿಕೊಳ್ಳುವುದರಲ್ಲಿ ಏನು ಪ್ರಯೋಜನ? ಡಾ: ನಂಜುಂಡಪ್ಪನವರ ವರದಿ ಎಂದು ಹೇಳುತ್ತೀರಿ. ಹಿಂದುಳಿದ ಪ್ರದೇಶಗಳಿಗೆ ಹಣ ಕೊಡುವುದಿಲ್ಲ. ಬೇಲೂರು ಘೋಷಣೆ ಎಂದು ಹೇಳುತ್ತೀರಿ. ಗ್ರಾಮ ಪಂಚಾಯತಿಗೆ ಹಣ ಕೊಡುವುದಿಲ್ಲ. ಏಕೆ ಇವರು ಬೇಲೂರ ಘೋಷಣೆ ಎಂದು ಹೇಳಬೇಕು?

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬರುವ ಹಣ ಕೂಡ ಇವರು ಕೆಇಬಿಗೆ ಕಟಾವಣೆಮಾಡುವುದಕ್ಕೆ ಕೊಡುವುದು. ಪಂಚಾಯತಿಗಳು ಉದ್ಧಾರ ಆಗಲಿ ಎಂದು ನೀವು ಹಣ ಕೊಡಲೇ ಇಲ್ಲ. ಹಣ ಕೊಟ್ಟ ಹಾಗೆ ತೋರಿಸಿ, ಕೆಇ–ಬಿಗೆ ಅಥವಾ ಕೆಪಿಟಿಸಿಎಲ್‌ಗೆ ಅಡ್ಜಸ್ಟ್‌ಮೆಂಟ್ ತೋರಿಸಿ ಎರಡೂವರೆ ಲಕ್ಷ ರೂ ಬಿಲ್ ಕೊಟ್ಟರೆ 80 ಸಾವಿರ ರೂ. ಅಲ್ಲಿಗೆ ತರುತ್ತೀರಿ. ಆ ಬಿಲ್ ಕಲೆಕ್ಟರ್‌ಗೆ, ಸೆಕ್ರೆಟರಿಗೆ ಸಂಬಳ ಕೊಡುವುದರೊಳಗೆ ಮುಗಿದು ಹೋಯಿತು. ಇನ್ನೊಂದಷ್ಟು ಸ್ಟಾಫ್ ಜಾಸ್ತಿ ಮಾಡಿ ಅವರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಒಂದು ಬ್ಯಾಂಕ್ ಗ್ಯಾರಂಟಿ ಕೊಡುತ್ತೀರಾ? ನಿಮ್ಮ ಹಾಗೆಯೇ ಅವರೂ ಸಾಲ ಮಾಡಿ ಒಂದು ದಿವಸ ಹೋಗಲಿ.

ಡಾ: ಹೆಚ್. ಸಿ. ಮಹದೇವಪ್ಪ:– ಆ ತರಹ ಯಾವುದೇ ಪರಿಸ್ಥಿತಿ ಉದ್ಭವ ಆಗುವುದಿಲ್ಲ.

(ಗೊಂದಲ)

ಶ್ರೀ ಜೆ. ಎ. ಶ್ರೀರಾಮರೆಡ್ಡಿ:– ನಿಮ್ಮ ಪ್ರಕಾರವೇ ಎರಡು ಲಕ್ಷ ರೂಪಾಯಿ....

ಅಧ್ಯಕ್ಷರು:– ಅವರು ಉತ್ತರ ಹೇಳಲಿ.

ಡಾ: ಹೆಚ್. ಸಿ. ಮಹದೇವಪ್ಪ:– ಕೆಇಬಿಗೆ ದುಡ್ಡು ಕೊಟ್ಟಿದ್ದು, ಸ್ಟ್ಯಾಚುಟರಿ ಗ್ರಾಂಟ್ ಏನು ಕೊಟ್ಟಿದ್ದೇವೆ, ಅವರೇ ಕಟ್ಟಬೇಕಾಗಿತ್ತು. ಅವರು ಕಟ್ಟುವ ಬದಲು ಇದನ್ನು ಮಾಡಬೇಕು.

ಹಳ್ಳಿಗಳಲ್ಲಿ ಕತ್ತಲೆ ಆಗಬಾರದು ಎನ್ನುವ ದೃಷ್ಟಿಗೆ ಆ ರೀತಿ ಮಾಡಿದೆವು. ಮತ್ತು ಅವರಿಗೆ ಕೊಡಬೇಕಾದ ಐದು ಲಕ್ಷ ರೂಪಾಯಿ ಗ್ರಾಂಟನ್ನು ಕೊಟ್ಟೇ ಕೊಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಕೊಟ್ಟಿಲ್ಲ ಸಾರ್.

ಶ್ರೀ ವಾಟಾಣ್ ನಾಗರಾಜ್:– ಯಾವಾಗ ಕೊಡುತ್ತೀರಿ? ಎಲ್ಲಿ ಕೊಟ್ಟಿದ್ದೀರಿ? ಯಾವಾಗ ಕೊಡುತ್ತೀರಿ?

ಡಾ: ಹೆಚ್. ಸಿ. ಮಹದೇವಪ್ಪ:– ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಸಾರ್ ದುಡ್ಡು ಇಲ್ಲ.

(ಗೊಂದಲ)

ಶ್ರೀ ಜಿ. ವಿ. ಶ್ರೀರಾವರು ರೆಡ್ಡಿ:– ನಿಮ್ಮ ಹತ್ತಿರ ಹಣ ಇಲ್ಲ.

ಅಧ್ಯಕ್ಷರು:– ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಈಗ ಮಾನ್ಯ ಸಚಿವರು.....

(ಗೊಂದಲ)

ಅಧ್ಯಕ್ಷರು:– ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಗ್ರಾಮ ಪಂಚಾಯತಿ ದಿವಾಳಿ ಆಗುತ್ತಿದೆ. ಇವರು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತು.

ಅಧ್ಯಕ್ಷರು:– ಮಾನ್ಯ ನಾಗರಾಜ್ ಅವರೇ, ದಯಮಾಡಿ ಕುಳಿತುಕೊಳ್ಳಿ ಮಾನ್ಯ ಸಚಿವರೇ, ಆವತ್ತು ಇದೇ ಪ್ರಶ್ನೆ ಮೇಲೆ 2.5 ಲಕ್ಷ ರೂ. ಗಿಂತ ಜಾಸ್ತಿ ಕೊಟ್ಟಿಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಈ ಕಡೆಯವರೆಲ್ಲಾ ಹೇಳುತ್ತಿದ್ದರು ತಾವು ಕೊಟ್ಟಿದ್ದೇವೆ ಎಂದು ಹೇಳಿದಿರಿ; ಆದರೆ ಪರಿಪೂರ್ಣವಾದ ಚಿತ್ರ ಹೊರಹೊಮ್ಮಲಿಲ್ಲ ನಾನು ತಮ್ಮಲ್ಲಿ ವಿನಂತಿ ಮಾಡುವುದು ಏನೆಂದರೆ ಎಲ್ಲಾ ಸದಸ್ಯರನ್ನು ಆ ಕಡೆಯವರು, ಈ ಕಡೆಯವರು, ಎಲ್ಲರಿಗೂ ಪಂಚಾಯಿತಿಗೆ ಸಂಬಂಧಪಟ್ಟಿದ್ದು. ಬೇಲೂರು ಘೋಷಣೆ ಆಗಿದೆ. ಎಲ್ಲರನ್ನೂ ಕರೆದು ಒಂದು ಮೀಟಿಂಗ್ ಮಾಡಿ ಒಂದು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ನಾನು ನಿಮ್ಮಲ್ಲಿ ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಸಾರ್ ಮೀಟಿಂಗೇ ಬೇಕಾಗಿಲ್ಲ. ದುಡ್ಡು ಕೊಡುವುದು ಅಷ್ಟೇ.

ಅಧ್ಯಕ್ಷರು:– ಹಾಗಲ್ಲ ನಾನು ಹೇಳುವುದು. ನನ್ನ ಕಷ್ಟ ಅರ್ಥಮಾಡಿಕೊಳ್ಳಿ. ನಾನೇನೋ ಅಂದರೆ ನೀವೆಲ್ಲಾ ಕೇಳುತ್ತೀರಿ ಎಂದು ಅವಕಾಶ ಕೊಟ್ಟಿದ್ದೇನೆ. ಅರ್ಧಗಂಟೆ ಈ ಪ್ರಶ್ನೆ ಇಟ್ಟುಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಕೆ. ಎಸ್. ಈಶ್ವರಪ್ಪ:– ಸಾರ್ ಪ್ರಶ್ನೆ ಮುಂದೆ ಹೋದರೆ, ಉತ್ತರ ಬೇಕಾ, ದುಡ್ಡು ಬೇಕಾ ಸಾರ್. ಬರೇ ಪ್ರಶ್ನೆ ಮಾಡಿದರೆ ಸಾಕಾ ಸಾರ್?

ಅಧ್ಯಕ್ಷರು:– ಅದಕ್ಕೇ ನಾನು ಹೇಳಿರುವುದು. ಈಗ ಈಶ್ವರಪ್ಪನವರೇ, ದಯಮಾಡಿ ಅರ್ಥಮಾಡಿಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ:– ಮಾನ್ಯ ಎಂ. ಪಿ. ಪ್ರಕಾಶ್ ಅವರು ತುಂಬಾ ಸ್ಪಷ್ಟವಾಗಿ ಅವತ್ತು ಹೇಳಿದ್ದರು. ಮಾನ್ಯ ಯಡಿಯೂರಪ್ಪನವರು ಹೇಳುತ್ತಿರುವುದು ಸರಿ ಇದೆ. ಇಡೀ ಸದನ ಹೇಳುತ್ತಿರುವುದು ಸರಿ ಇದೆ. ಬಾಕಿ ಕೊಡಬೇಕಾದ್ದು ಇದೆ ಎಂಬ ಮಾತನ್ನು ಒಪ್ಪಿಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ತುಂಬಾ ಸ್ಪಷ್ಟವಾಗಿ ಹೇಳಲಿ. ಮೀಟಿಂಗ್ ಮಾಡಿ ಚರ್ಚೆ ತೀರಿಸಿಕೊಳ್ಳುವ ಅವಶ್ಯಕತೆ ನಮಗೆ ಇಲ್ಲ. ದುಡ್ಡು ಇಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಒಪ್ಪಿಕೊಳ್ಳಲಿ.

ಅಧ್ಯಕ್ಷರು:– ಮೀಟಿಂಗ್‌ನಲ್ಲಿ ವಿವರವಾಗಿ ಚರ್ಚೆ ಮಾಡಿರಿ ಯಾವುದಾದರೂ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯ. ಅಲ್ಲದೇ ಇದ್ದರೆ ಏನಾಗುತ್ತದೆ ಅಂದರೆ ಪ್ರಶ್ನೋತ್ತರ ಕಾಲದಲ್ಲಿ ಇದೆಲ್ಲಾ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– 31ನೇ ತಾರೀಖಿನ ಒಳಗೆ ಅವರು ಹೇಳಿದಹಾಗೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಲಿ.

ಡಾ: ಹೆಚ್. ಸಿ. ಮಹದೇವಪ್ಪ:– ಸಾರ್, 188 ಕೋಟಿ ರೂಪಾಯಿಯನ್ನು ಫೆಬ್ರವರಿ 5ನೇ ತಾರೀಖು ಬಿಡುಗಡೆ ಮಾಡಿದ್ದೇವೆ. ಮತ್ತು ಬ್ಯಾಲೆನ್ಸ್ 94.25 ಕೋಟಿ ರೂಪಾಯಿ ಎಫ್‌ಡಿಯಿಂದ ಮಾರ್ಚ್ 5ನೇ ತಾರೀಖು ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ನಾವು ಮಾರ್ಚ್ 31 ರೊಳಗೆ ರಿಲೀಸ್ ಮಾಡುತ್ತೇವೆ. ಐದು ಲಕ್ಷ ರಿಲೀಸ್ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಇದು ಸರಿಯಲ್ಲ ಮಾನ್ಯ ಸದಸ್ಯರು ಕೇಳಿರುವ ಮೂಲ ಪ್ರಶ್ನೆಗೆ ಸಚಿವರು ಪ್ರಮಾಣಿಕ ಉತ್ತರ ಹೇಳಬೇಕು.

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:– ದಯಮಾಡಿ ಎಲ್ಲಾ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಅದಕ್ಕೋಸ್ಕರವೇ ನಾನು ತಮ್ಮೆಲ್ಲರ ಪರವಾಗಿ ಮಾನ್ಯ ಸಚಿವರಲ್ಲಿ ವಿನಂತಿಸಿಕೊಂಡಿದ್ದೇನೆ. ಇದು ಎಲ್ಲರಿಗೂ ಸಂಬಂಧಿಸಿರುವ ವಿಚಾರವಾಗಿರುವುದರಿಂದ, ಈ ಕುರಿತಂತೆ ಮಾನ್ಯ ಸಚಿವರು ಒಂದು ಸಭೆ ಕರೆದು ಸ್ಪಷ್ಟೀಕರಣ ನೀಡುವ ಮೂಲಕ ಮಾನ್ಯ ಸದಸ್ಯರನ್ನು ಸಮಾಧಾನಗೊಳಿಸಲು ಹೇಳಿದ್ದೇನೆ. ನೀವು ಇದಕ್ಕೂ ಒಪ್ಪುವುದಿಲ್ಲ. ಮತ್ತು ಲಭ್ಯವಿರುವ ಅಂಕಿ–ಅಂಶಗಳ ಆಧಾರದ ಮೇಲೆ ಮಾನ್ಯ ಸಚಿವರು ಉತ್ತರಿಸಿದರೆ ಅದಕ್ಕೂ ಒಪ್ಪುವುದಿಲ್ಲ. ಪ್ರಶ್ನೋತ್ತರ ಕಾಲದಲ್ಲಿ ಎಲ್ಲರಿಗೂ ಸಮಾಧಾನ ಮಾಡುವುದಕ್ಕಾಗುತ್ತದೆಯೇ? ಯಡಿಯೂರಪ್ಪನವರೆ, ಈ ರೀತಿಯಾದರೆ ಹೇಗೆ ಸಭೆ ನಡೆಸುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ:– ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರು ಉಪಸ್ಥಿತರಿರುವಂತೆ ನೋಡಿಕೊಳ್ಳುವುದಕ್ಕೋಸ್ಕರ ಸರ್ಕಾರಿ ಮುಖ್ಯ ಸಚೇತಕರಿದ್ದಾರೆ. ಎಲ್ಲಾ

ಮಾನ್ಯ ಸದಸ್ಯರಿಗೂ ಸಂಬಂಧಿಸಿರುವ ಪ್ರಶ್ನೆಯನ್ನು ಸದಸ್ಯರಾದ ಕೃಷ್ಣಮೂರ್ತಿಯವರು ಕೇಳಿದರೆ, 'ನಮ್ಮ ಮಾನ ತೆಗೆಯುವುದು ಬೇಡ' ಎಂದು ಕೊರಿಸುವುದಕ್ಕೆ ಹೋದರೆ ಇದ್ಯಾದ ಧರ್ಮ? ಕೃಷ್ಣಮೂರ್ತಿಯವರೆ, ಇದು 224 ಜನ ಮಾನ್ಯ ಸದಸ್ಯರ ಮರ್ಯಾದೆಯ ಪ್ರಶ್ನೆಯಾಗಿದೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ:– ಬಿಜೆಪಿ ಶಾಸಕರಿರಬಹುದು, ಕಾಂಗ್ರೆಸ್ ಪಕ್ಷದ ಶಾಸಕರಿರಬಹುದು, ಜನತಾದಳ ಶಾಸಕರಿರಬಹುದು, ಎಲ್ಲರೂ ಈ ಸಮಸ್ಯೆ ಅನುಭವಿಸುತ್ತಿದ್ದಾರೆ.

ಡಾ: ಹೆಚ್. ಸಿ. ಮಹದೇವಪ್ಪ:– ಇದರ ಬಗ್ಗೆ ಸರ್ಕಾರವೂ ಅಷ್ಟೇ ಪ್ರಾಮಾಣಿಕವಾಗಿ ಸರಿಯಾದ ಉತ್ತರ ಒದಗಿಸಿದೆ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಮುಖಾಂತರ ಭಾರತ ದೇಶದ ಹಳ್ಳಿಗಳನ್ನು ಕಟ್ಟಬೇಕೆಂಬ ಸಂವಿಧಾನ ತಿದ್ದುಪಡಿಗೆ ವಿರುದ್ಧವಾಗಿ ಏನೂ ಮಾಡುವುದಕ್ಕಾಗುವುದಿಲ್ಲ ಮತ್ತು ಅಧಿಕಾರ ಬೇಡವೆಂದು ಎಲ್ಲಾ ರಾಜ್ಯಗಳ ಪ್ರತಿಪಕ್ಷಗಳ ಪ್ರತಿನಿಧಿಗಳು ಬಯಸುವುದಾದರೆ ಮತ್ತೆ ಪಾರ್ಲಿಮೆಂಟ್‌ಗೆ ವಾಪಸ್ಸು ಕಳುಹಿಸಿಕೊಡಲಾಗುವುದು. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ನೂರು ಹಳ್ಳಿಗಳನ್ನು ಬಲಪಡಿಸಬೇಕಾಗಿದೆ. ಇದಕ್ಕೆ ಸರ್ಕಾರ ಬದ್ಧವಿದ್ದು, ಅಗತ್ಯವಾದ ಸಿಬ್ಬಂದಿ, ಹಣಕಾಸನ್ನು ಒದಗಿಸಿಕೊಡುತ್ತೇವೆ. ಇದಕ್ಕೆ ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಈ ಕುರಿತಾದ ಅರ್ಧ ಗಂಟೆ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು.

ಬೆಂಗಳೂರು ಜಿಲ್ಲೆಯಲ್ಲಿ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ವರ್ಗಾಯಿಸುವುದು

235(3395) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಕೊರತೆ ಇದ್ದರೂ, ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಅನುದಾನಿತ ಮತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಇ) ಈ ಸರ್ಕಾರಿ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಿಗೆ ವರ್ಗಾಯಿಸಲು ಸರ್ಕಾರದ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುವುದಿಲ್ಲ. ಆದರೆ 04 ಅನುದಾನಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುತ್ತದೆ.

ಆ) ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಇರುವುದಿಲ್ಲ.

ವಿದ್ಯಾರ್ಥಿಗಳ ಕೊರತೆಯಿರುವ ಖಾಸಗಿ ಅನುದಾನಿತ ಪ್ರೌಢಶಾಲೆಗಳ ವಿವರ ಕೆಳಕಂಡಂತಿದೆ;